**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 8210/2023 ಸಿ.ಡಬ್ಲೂ.4 ಪಿ.ಡಬ್ಲೂ.4

| | |
|---|---|
| ಹೆಸರು | ಹಣಮಂತರಾಯ |
| ತಂದೆ/ಗಂಡ | ಮಲಕ್ಕಪ್ಪಾ |
| ವಯಸ್ಸು | 54 ವರ್ಷ |
| ಉದ್ಯೋಗ | ASI ಶಹಾಬಾದ |
| ವಾಸಸ್ಥಳ | ಶಹಾಬಾದ |

ದಿನಾಂಕ 22-01-2026

ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿಃ 10-02-2023 ರಿಂದ ದಿಃ 02-01-2024 ರವರೆಗೆ ನರೋಣಾ ಠಾಣೆಯಲ್ಲಿ ಪೋಲಸ್ ASI ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23-08-2023 ರಂದು ಮ. 3.45 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಕಡಗಂಚಿ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತಿದ್ದಾನೆ ಅಂತಾ ಬಾತ್ಮಿ ಬಂದಿದ್ದು ದಾಳಿಗೆ ಹೋಗಬೇಕು ಅಂತಾ ತಿಳಿಸಿದ ಕಾರಣ,ನಾನು, ಚಾಸಾ 5, ಚಾಸಾ 6, ಚಾಸಾ 7 ಮತ್ತು ಪಂಚರಾದ ಚಾಸಾ 2 ಮತ್ತು 3 ರವರು ಸೇರಿಕೊಂಡು 4.15 ಕ್ಕೆ ಠಾಣೆಯಿಂದ ಹೊರಟು 4.45 ಗಂಟೆಗೆ ಕಡಗಂಚಿ ತಲುಪಿ ಕಡಗಂಚಿ ಗ್ರಾಮದ ಚಂದ್ರತಾಯಿ ದೇವಸ್ಥಾನದ ಹತ್ತಿರ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿ ರಟ್ಟಿನ ಡಬ್ಬಿಯಲ್ಲಿ ಮಧ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದದ್ದನ್ನು ಖಚಿತ ಪಡಿಸಿಕೊಂಡು ಹೋಗಿ ಪಂಚರ ಸಮಕ್ಷಮ ದಾಳಿ ಮಾಡಲಾಗಿ, ಅವರನ್ನು ಹಿಡಿದು ವಿಚಾರಣೆ ಮಾಡಲಾಗಿ ಅವರ ಶಿವಯ್ಯಾ ಗುತ್ತೆದಾರ ಅಂತಾ ತಿಳಿಸಿರುತ್ತಾನೆ, ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ ಮತ್ತು ಸಾರಾಯಿಯನ್ನು ಮಾರಾಟ ಮಾಡಲು ನಿನ್ನ ಹತ್ತಿರ ಪರವಾನಿಗೆ ಇದೇಯಾ ಅಂತಾ ವಿಚಾರಿಸಿದಾಗ ಅವನ ಬಳಿ ಪರವಾನಿಗೆ ಇಲ್ಲ ಅಂತಾ ತಿಳಿಸಿರುತ್ತಾನೆ. ಚಾಸಾ 1 ರವರು ಆರೋಪಿ ಬಳಿ ಇದ್ದ ಮಧ್ಯವನ್ನು ಪರೀಕ್ಷಿಸಿ ನೋಡಲಾಗಿ 650 ಎಮ ಎಲ ನ ಪವರ ಕೂಲ ಬಿಯರನ 6 ಬಾಟಲಗಳು, 650 ಎಮ ಎಲ ನ ಕಿಂಗಫೀಷರ ಸ್ಟ್ರಾಂಗ ಬಿಯರನ 19 ಬಾಟಲಗಳು, 330 ಎಮ ಎಲ ಕಿಂಗಫೀಷರ ಸ್ಟ್ರಾಂಗ ಬಿಯರನ 8 ಟಿನಗಳು, 90 ಎಮ ಎಲ ನ ಓರಿಜನಲ್ ಚಾಯಿಸ್ ವಿಸ್ಕಿಯ 120 ಪೌಚಗಳು, ಸದರಿ ಮು.ಮಾಲನ್ನು FSL ಕುರಿತು ಬಿಳಿ ಬಟೆಯಲ್ಲಿ ಫ್ಯಾಕ ಮಾಡಿ ವಿ.ಎಮ. ಸೀಲ್ ಮಾಡಲಾಯಿತು. 5.00 ರಿಂದ 6.00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ನಂತರ 6.00 ಗಂಟೆಗೆ ಬಿಟ್ಟು 6.30 ಕ್ಕೆ ಠಾಣೆಗೆ ಬಂದು ಠಾಣಾಧಿಕಾರಿಯ ಸಂತೋಷರವರ ಮುಂದೆ ಆರೋಪಿ, ಮು. ಮಾಲ ಮತ್ತು ವರದಿಯೊಂದಿಗೆ ಹಾಜರುಪಡಿಸಿರುತ್ತೇವೆ.

ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು. ಮಾ 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರಃ ಎಸ್ ಎ ಕೆ ವಕೀಲರಿಂದ:</u>

ನಾವು ದಾಳಿ ಮಾಡಲು ಕ್ರೂಜರ ವಾಹನದಲ್ಲಿ ಹೋಗಿರುತ್ತೇವೆ, ಸದರಿ ವಾಹನದ ಸಂಖ್ಯೆ ನನಗೆ ನೆನಪು ಇಲ್ಲ. ಘಟನಾ ಸ್ಥಳಕ್ಕೆ 4.45 ಕ್ಕೆ ತಲುಪಿ 5.00 ಗಂಟೆಗೆ ದಾಳಿ ಮಾಡಿರುತ್ತೇವೆ. ನಾವು ಚಂದ್ರತಾಯಿ ದೇವಸ್ಥಾನದ ಪಕ್ಕದಲ್ಲಿ ನಿಂತಿದ್ದೇವು. ಆರೋಪಿಯು ಚಂದ್ರತಾಯಿ ದೇವಸ್ಥಾನದ ಉತ್ತರ ದಿಕ್ಕಿಗೆ ಕುಳಿತಿದ್ದನು. ಆರೋಪಿಯು ಎಷ್ಟು ಜನರಿಗೆ ಎಷ್ಟು ಹಣಕ್ಕೆ ಮಾರಾಟ ಮಾಡುತ್ತಿದ್ದನು ಎಂದರೆ ಸಾಕ್ಷಿಯು ಆರೋಪಿಯ ಬಳಿ ಯಾರು ಇರಲಿಲ್ಲ, ಆರೋಪಿಯ ಡಬ್ಬಿಯಲ್ಲಿ ಮಧ್ಯವನ್ನು ಇಟ್ಟುಕೊಂಡು ಕುಳಿತಿದ್ದನು ಅಂತಾ ನುಡಿಯುತ್ತಾರೆ. ಆರೋಪಿಯು ಮಾರಾಟ ಮಾಡುವುದನ್ನು ನಾನು ಕಣ್ಣಿನಿಂದ ನೋಡಿಲ್ಲ ಎಂದರೆ ಸರಿ. ಚಾಸಾ 1 ರವರು ದಾಳಿ ಮಾಡುವ ಮುಂಚೆ ಸಮುಚ್ಚಿ ತ ವರದಿಯನ್ನು ತಯಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಮಧ್ಯವನ್ನು ಇಟ್ಟುಕೊಂಡ ರಟ್ಟಿನ ಡಬ್ಬಿ ಕಟ್ಟಿಗೆ ಬಣ್ಣದ್ದು ಇತ್ತು. ಸದರಿ ಡಬ್ಬಿಯನ್ನು ಜಪ್ತಿ ಪಡಿಸಿಕೊಂಡ ಬಗ್ಗೆ ನನಗೆ ನೆನಪು ಇಲ್ಲ. ಚಾಸಾ 1 ರವರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಚಾಸಾ 1 ರವರು ಠಾಣಾ ಅಂಕಿ ಸಂಖ್ಯೆ ಹೆಚ್ಚಿ ಸಲು ಒಂದು ಸುಳ್ಳು ಪ್ರಕರಣ ದಾಖಲಿಸಿ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಳಿಗೆ ಹೋಗಿಲ್ಲ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ, ಆರೋಪಿಯನ್ನು ಠಾಣಾಧಿಕಾರಿಯ ಮುಂದೆ ಹಾಜರಪಡಿಸದೇ ಇದ್ದರೂ ಹಾಜರಪಡಿಸಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ